# ಪರ್ಯಾಯ ಶೈಕ್ಷಣಿಕ ಯೋಜನೆ–2021-22

**7ನೇ ತರಗತಿ** **ಆಗಸ್ಟ್ ಮಾಹೆ** **ಪ್ರಥಮ ಭಾಷೆ ಕನ್ನಡ**

| ಕ್ರ ಸಂ | ತಿಂಗಳು / ವಾರ | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | ಆಗಸ್ಟ್ 1 ನೇ ವಾರ | ಪೂರ್ವಭಾವಿ ಚಟುವಟಿಕೆಗಳು<br>ವರ್ಣ ಮಾಲೆ,<br>ಸ್ವರಾಕ್ಷರಗಳು,<br>ವ್ಯಂಜನಗಳು,<br>ಯೋಗವಾಹಗಳನ್ನು ಗುರುತಿಸುವರು.<br><br>ಗುಣಿತಾಕ್ಷರಗಳು ಒತ್ತಕ್ಷರಗಳನ್ನು ಓದಿ ಬರೆಯುವರು. | ಚಟುವಟಿಕೆ–1<br>ಕನ್ನಡ ವರ್ಣಮಾಲೆಯ ಅಕ್ಷರಗಳನ್ನು ಅದಲು ಬದಲು ಮಾಡಿ ಗುರುತಿಸುವ ಚಟುವಟಿಕೆ.<br><br>ಚಟುವಟಿಕೆ–2<br>• ನೀಡಿದ ವ್ಯಂಜನಾಕ್ಷರಗಳಿಗೆ ಗುಣಿತಾಕ್ಷರಗಳನ್ನು ಬರೆಯುವರು.<br>• ಒತ್ತಕ್ಷರಗಳನ್ನು ಓದಿ ನಕಲು ಮಾಡುವುದು.<br>• ಸುಮೇರು ಭಾಗ–1 (7ನೇ ತರಗತಿ) ಯ ಪುಟ ಸಂಖ್ಯೆ 1,2,3,4,5 ನ್ನು ಬಳಸುವುದು. | ಅಭ್ಯಾಸ ಹಾಳೆ |

## ಪುನರ್ ಮನನ

**ಮೊದಲನೇ ವಾರ** **ಅಭ್ಯಾಸದ ಹಾಳೆ – 1**

1) ಇಲ್ಲಿರುವ ಸ್ವರಾಕ್ಷರಗಳನ್ನು ಅನುಕ್ರಮವಾಗಿ ಬರೆಯಿರಿ

ಎ ಉ
ಊ ಆ ಐ
ಏ ಈ ಆ ಇ
ಋ ಒ ಔ
ಅ ಓ

| | | | | | | | |
|---|---|---|---|---|---|---|---|
| | | | | | | | |
| | | | | | | | |

2) ಇಲ್ಲಿ ಬಿಟ್ಟಿರುವ ವ್ಯಂಜನಾಕ್ಷರಗಳನ್ನು ಕ್ರಮವಾಗಿ ಬರೆಯಿರಿ

| | | | | |
|---|---|---|---|---|
| ಕ | | | ಘ | |

| | | | | |
|---|---|---|---|---|
| | | ಜ | | ಞ |

| | | | | |
|---|---|---|---|---|
| ಟ | ಠ | | | |

| | | | | |
|---|---|---|---|---|
| | ಥ | | ಧ | |

| | | | | |
|---|---|---|---|---|
| ಪ | | | | |

| | | | | | | | | |
|---|---|---|---|---|---|---|---|---|
| | ರ | | | | | | | ಳ |

3) ಯೋಗವಾಹಗಳು → ☐ ☐

ಇವುಗಳಿಗೆ ಗುಣಿತಾಕ್ಷರಗಳನ್ನು ಬರೆಯಿರಿ

ಕ = ---------------------------------------------------

ಜ = ---------------------------------------------------

ಬ = ---------------------------------------------------

ಯ = ---------------------------------------------------

ಮ = ---------------------------------------------------

ಫ = ---------------------------------------------------

ಝ = ---------------------------------------------------

ಠ = ---------------------------------------------------

ನ = ---------------------------------------------------

ಳ = ---------------------------------------------------

5) ಈ ಒತ್ತಕ್ಷರಗಳನ್ನು ಓದಿ, ನಕಲು ಮಾಡಿ

| ಜ್ಜ | ಣ್ಣ | ಬ್ಬ | ವ್ವ | ಟ್ಟ | ಕ್ಕ | ಗ್ಗ | ದ್ದ | ಪ್ಪ | ಸ್ಸ | ಹ್ಹ | ಳ್ಳ |
|---|---|---|---|---|---|---|---|---|---|---|---|
| | | | | | | | | | | | |

| ತ್ತ | ನ್ನ | ಮ್ಮ | ಯ್ಯ | ರ್ರ | ಲ್ಲ | ಖ್ಖ | ಠ್ಠ | ಢ್ಢ | ಛ್ಛ | ಝ್ಝ | ಭ್ಭ |
|---|---|---|---|---|---|---|---|---|---|---|---|
| | | | | | | | | | | | |

ಗದ್ಯ : ಪುಟ್ಟಜ್ಜಿ ಪುಟ್ಟಜ್ಜಿ ಕಥೆ ಹೇಳು

| ಕ್ರ ಸಂ | ತಿಂಗಳು / ವಾರ | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 2 | ಆಗಸ್ಟ್ 1 ನೇ ವಾರ | ಅಪರಿಚಿತ ಸನ್ನಿವೇಶದ ಘಟನೆಗಳನ್ನು ಆಲಿಸಿ ಅರ್ಥ ಮಾಡಿಕೊಳ್ಳುವುದು | ಚಟುವಟಿಕೆ–1<br>ಶಿಕ್ಷಕರು ಅಪರಿಚಿತ ಸನ್ನಿವೇಶದ ಕಥೆ/ಸಂಭಾಷಣೆ/ಸಂವಾದ ಚರ್ಚೆಯನ್ನು ಮಕ್ಕಳೊಂದಿಗೆ ಮಾಡುವರು.<br>ಉದಾ: ರಸ್ತೆ ಅಪಘಾತ, ಬ್ಯಾಂಕ್ ಸ್ಥಳದಲ್ಲಿ ಗ್ರಾಹಕರೊಂದಿಗೆ ನಡೆಯುವ ಸಂಭಾಷಣೆ, ರೈಲ್ವೆ ನಿಲ್ದಾಣ, ಆಸ್ಪತ್ರೆ . ಹೀಗೆ ವಿವಿಧ ಸ್ಥಳ ಹಾಗೂ ಸನ್ನಿವೇಶಗಳ ಘಟನೆಗಳು.<br>ಇದಕ್ಕಾಗಿ ಶಿಕ್ಷಕರು ಧ್ವನಿ ಮುದ್ರಿಕೆಗಳು, ಕಥಾ ಸಂಗ್ರಹ, ಸಂವಾದ, ಸಂಭಾಷಣೆಗಳನ್ನೊಳಗೊಂಡ ಸಾಹಿತ್ಯವನ್ನು ಬಳಸಿಕೊಳ್ಳುವುದು. | ಮಕ್ಕಳು ಆಲಿಸಿ ಅರ್ಥ ಮಾಡಿಕೊಂಡ ಘಟನೆಗಳ ಕುರಿತು ಏನು? ಏಕೆ? ಹೇಗೆ? ಇತ್ಯಾದಿ ಮೌಖಿಕ ಮತ್ತು ಲಿಖಿತ ಪ್ರಶ್ನೆಗಳನ್ನು ಕೇಳುವುದು.<br><br>ಅಭ್ಯಾಸ ಹಾಳೆ ಬಳಕೆ |
| | | | ಚಟುವಟಿಕೆ–2<br>ಮಕ್ಕಳು ತಾವು ಕೇಳಿ ತಿಳಿದುಕೊಂಡ ಕಥೆಗಳನ್ನು ಸಂಕ್ಷಿಪ್ತವಾಗಿ ಹೇಳಿಸುವುದು. ಇತರ ವಿದ್ಯಾರ್ಥಿಗಳು ಅವುಗಳನ್ನು ಆಲಿಸುವಂತೆ ತಿಳಿಸುವುದು | ಮೌಖಿಕ ಪ್ರಶ್ನೆಗಳನ್ನು ಮಕ್ಕಳಿಗೆ ಶಿಕ್ಷಕರು ಕೇಳುತ್ತಾ ನಿರಂತರ ಮೌಲ್ಯಮಾಪನ ಮಾಡುವರು |

| ಕ್ರ ಸಂ | ತಿಂಗಳು / ವಾರ | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | | ಚಟುವಟಿಕೆ–3<br>ಪುಟ್ಟಜ್ಜಿ ಪುಟ್ಟಜ್ಜಿ ಕಥೆ ಹೇಳು – ಗದ್ಯಭಾಗದ ಮಾದರಿ ಓದು, ಗಟ್ಟಿ ಓದು ಹಾಗೂ ಮೌನ ಓದು ಮಾಡಿಸುವುದು (ಪುಟ ಸಂಖ್ಯೆ 1 ರಿಂದ 5 ರ ವರೆಗೆ)<br>• ಇದಕ್ಕೆ ಸಂವೇದ ಪಾಠವನ್ನು ಶಿಕ್ಷಕರು ಬಳಸಿಕೊಳ್ಳಬಹುದು<br>• ದೀಕ್ಷಾ ಆಪ್ನಲ್ಲಿ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಪಠ್ಯಕ್ಕೆ ಸಂಬಂಧಿಸಿದಂತೆ ವಿಸ್ತೃತ ಚಟುವಟಿಕೆಗಳನ್ನು ಕೈಗೊಳ್ಳಬಹುದಾಗಿದೆ<br>• ಹೊಸ ಪದಗಳ ಅರ್ಥ : ಹಾಡ್ಗತೆ, ಪ್ರಾಣಿಗಿಂಡಿ, ತರಾವರಿ, ಭೀತಿ ಇತ್ಯಾದಿ ಹೊಸ ಪದಗಳಿಗೆ ಅರ್ಥ ತಿಳಿಸಿಕೊಡುವುದು. | ಪುಟ ಸಂಖ್ಯೆ 7 ಮತ್ತು 8 ರಲ್ಲಿ ನೀಡಿರುವ ಅಭ್ಯಾಸ ಚಟುವಟಿಕೆ ಸುಮೇರು ಅಭ್ಯಾಸ ಪುಸ್ತಕದ ಚಟುವಟಿಕೆಗಳನ್ನು ಸಮ್ಮಿಳಿತಗೊಳಿಸಿದ ಅಭ್ಯಾಸ ಹಾಳೆಯನ್ನು ಶಿಕ್ಷಕರು ಬಳಸಬಹುದಾಗಿದೆ. |
| | | | ಚಟುವಟಿಕೆ–4<br>ಭಾಷಾಭ್ಯಾಸದ ಚಟುವಟಿಕೆಗಳು<br>(ಪುಟ 8,9 ನೋಡಿ) | ಅಭ್ಯಾಸ ಹಾಳೆ |

| ಕ್ರ. ಸಂ | ತಿಂಗಳು / ವಾರ | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | | ಚಟುವಟಿಕೆ–5<br>ವ್ಯಾಕರಣಾಂಶಗಳು<br>ನಾಮಪದ, ಸರ್ವನಾಮಗಳು<br>(ಪುಟ 9,10 ಪಠ್ಯಪುಸ್ತಕ ಹಾಗೂ ಸುಮೇರು ಅಭ್ಯಾಸ ಪುಸ್ತಕದ ಪುಟ ಸಂಖ್ಯೆ 13, 16 ರಲ್ಲಿರುವ ನಾಮಪದ, ಸರ್ವನಾಮಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಮಾಡಿಸುವುದು.<br><br>ಯೋಜನೆ : ಹಿರಿಯರಿಂದ ಕೇಳಿ ತಿಳಿದ ಕಥೆಗಳನ್ನು ಬರೆದುಕೊಂಡು ಬರಲು ತಿಳಿಸಿ. ಎಲ್ಲಾ ಮಕ್ಕಳ ಕಥಾ ಸಂಗ್ರಹ ಮಾಡಲು ತಿಳಿಸಿ. | ಅಭ್ಯಾಸ ಹಾಳೆ |

**ವಿಶೇಷ ಸೂಚನೆಗಳು :**

**ಶಿಕ್ಷಕರು ಅಭ್ಯಾಸ ಹಾಳೆಗಳನ್ನು ಮಾದರಿಯಾಗಿ ಬಳಸಬಹುದು. ಈ ಕೆಳಕಂಡ ಅಭ್ಯಾಸ ಹಾಳೆಗಳಿಗೂ ಪರಿಣಾಮಕಾರಿ ಅಭ್ಯಾಸ ಹಾಳೆಗಳನ್ನು ಶಿಕ್ಷಕರು ಸ್ವತಃ ತಯಾರು ಮಾಡಿ ಬಳಸಿಕೊಳ್ಳುವುದು. ಅದೇ ರೀತಿ ಇಲ್ಲಿ ನೀಡಿರುವ ಚಟುವಟಿಕೆಗಳೇ ಅಂತಿಮವಲ್ಲ. ಶಿಕ್ಷಕರು ಇವುಗಳಿಗಿಂತಲೂ ಪರಿಣಾಮಕಾರಿ ಚಟುವಟಿಕೆಗಳನ್ನು ಆಯೋಜಿಸಿ ಆನ್‌ಲೈನ್ ಮತ್ತು ಆಫ್‌ಲೈನ್ ಗಳೆರಡರಲ್ಲೂ ಬಳಸಿಕೊಳ್ಳುವಲ್ಲಿ ಸ್ವತಂತ್ರರು.**

# ಗದ್ಯ:– ಪುಟ್ಟಜ್ಜಿ ಪುಟ್ಟಜ್ಜಿ ಕಥೆ ಹೇಳು

**ಎರಡನೇ ವಾರ** **ಅಭ್ಯಾಸದ ಹಾಳೆ – 2**

**1. ಪದಗಳ ಅರ್ಥ ಬರೆಯಿರಿ.**

1. ಪೊರೆ ----------
2. ಸಂಭ್ರಮ ---------
3. ಆಶ್ರಯ ----------
4. ಮದ್ದು -----------

**2. ಕೆಳಗಿನ ವಾಕ್ಯಗಳಲ್ಲಿ ಅಡಿಗೆರೆ ಎಳೆದು ನಾಮಪದಗಳನ್ನು ಗುರುತಿಸಿ.**

1. ನಮ್ಮ ಮನೆ ದೊಡ್ಡದಾಗಿದೆ.
2. ಕಷ್ಟಪಟ್ಟು ಬದುಕು ಸಾಗಿಸುತ್ತಿದ್ದ ಯುವಕ ಸೋಲಲಿಲ್ಲ
3. ಕಾಡಿನಲ್ಲಿ ಉಪಯುಕ್ತವಾದ ಶ್ರೀಗಂಧದ ಮರಗಳಿವೆ
4. ಹುಡುಗ ಹುಡುಗಿ ಒಂದಾಗಲು ಚುಕ್ಕಿಯೇ ಮುಂದಾಯಿತು.

**3. ಕೊಟ್ಟಿರುವ ಪದಗಳನ್ನು ರೂಢನಾಮ, ಅಂಕಿತನಾಮಗಳಾಗಿ ವಿಂಗಡಿಸಿ ಬರೆಯಿರಿ.**

ಸ್ನೇಹಿತ, ಕವಿ, ಅಮರ್, ಪುಸ್ತಕ, ಗಂಟೆ, ಕಮಲ, ಸಂತೆ, ವಿಜಯ್, ಫಾತಿಮಾ, ಸ್ವರೂಪ್

| | ರೂಢನಾಮ | ಅಂಕಿತ ನಾಮ |
|---|---|---|
| 1 | | |
| 2 | | |
| 3 | | |
| 4 | | |
| 5 | | |

**4. ಸರ್ವನಾಮಗಳ ವಚನ ಬದಲಾಯಿಸಿ.**

| | ಏಕವಚನ | ಬಹುವಚನ |
|---|---|---|
| **1** | ನಾನು | |
| **2** | ನೀನು | |
| **3** | ಅವನು | |
| **4** | ಅವಳು | |
| **5** | ಅದು | |
| **6** | ಇದು | |

**5. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಪುಟ್ಟಜ್ಜಿಯ ಬಳಿ ಹುಡುಗ ಯಾವ ಕಥೆ ಹೇಳಬೇಕೆಂದು ಕೇಳಿದನು ?

   ಉತ್ತರ: ----------------------------------------

2. ಜಿಂಕೆಯ ಕುತ್ತಿಗೆಯಲ್ಲಿ ಏನಿತ್ತು ?

   ಉತ್ತರ: ----------------------------------------

3. ಹಳ್ಳದ ದಂಡೆಯ ಮೇಲಿನ ಊರು ಏನಾಯಿತು ?

   ಉತ್ತರ: ----------------------------------------

**6. ಈ ವಾಕ್ಯಗಳನ್ನು ಯಾರು ಯಾರಿಗೆ ಹೇಳಿದರು.**

1. ಏಯ್ ಯುವಕ ಈ ಜಿಂಕೆ ನನ್ನ ಆಹಾರ

   ಉತ್ತರ: ----------------------------------------

2. ನಾನು ಚುಕ್ಕಿಯನ್ನು ಬಿಟ್ಟು ಇರಲಾರೆ

   ಉತ್ತರ: ----------------------------------------

**7. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. ಹುಲಿ ಮತ್ತು ಯುವಕನ ನಡುವೆ ನಡೆದ ಸಂಭಾಷಣೆ ಏನು ?

   ಉತ್ತರ: ----------------------------------------

2. ಜಿಂಕೆಯನ್ನು ನೋಡಿದ ಯುವತಿ ಏನು ಮಾಡಿದಳು ?

ಉತ್ತರ: ----------------------------------------

ಪದ್ಯ 1 : ಗಿಡ – ಮರ – ಸತ್ಯಾನಂದ ಪಾತ್ರೋಟ

| ಕ್ರ ಸಂ | ತಿಂಗಳು / ವಾರ | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 3 | ಆಗಸ್ಟ್ 2 ನೇ ವಾರ | ಕವಿತೆ, ಕಥೆ, ನಾಟಕ, ಪ್ರಬಂಧ, ಪ್ರಹಸನ ಇವುಗಳನ್ನು ಆಲಿಸಿ ಅರ್ಥ ಮಾಡಿಕೊಳ್ಳುವುದು. | ಚಟುವಟಿಕೆ–1<br>ಮಕ್ಕಳಿಂದ ಕವಿತೆ, ಕಥೆ, ನಾಟಕಗಳು, ಪ್ರಹಸನಗಳನ್ನು ಪ್ರಸ್ತುತಪಡಿಸುವುದು<br><br>ಚಟುವಟಿಕೆ–2<br>ಕವಿತೆ, ಕಥೆ, ನಾಟಕ, ಪ್ರಹಸನಗಳ ಕುರಿತ ಧ್ವನಿಮುದ್ರಿಕೆಗಳನ್ನು ಬಳಸಿ ಆಲಿಸಲು ತಿಳಿಸುವುದು<br><br>ಚಟುವಟಿಕೆ–3<br>’"ಗ್ರಂಥಾಲಯದಲ್ಲಿ ಸಿಗುವ ಕಥೆ ಕವಿತೆ ಓದೋಣ, – ಆಲಿಸೋಣ"<br>ಆಕಾಶವಾಣಿ, ಧ್ವನಿಸುರಳಿಗಳನ್ನು ಬಳಸಿ ನಾಟಕ, ಪ್ರಹಸನಗಳ ಆಲಿಸುವ ಚಟುವಟಿಕೆ<br><br>ಚಟುವಟಿಕೆ–4<br>"ಪ್ರಬಂಧ ಓದೋಣ ವಿಷಯ ಅರಿಯೋಣ" – ನಿಯೋಜಿತ ಚಟುವಟಿಕೆ ನೀಡುವುದು<br>ಉದಾ: ನಾನು ಭೇಟಿ ಮಾಡಿದ ಪ್ರವಾಸಿ ತಾಣ ,ನನ್ನ ನೆಚ್ಚಿನ ವ್ಯಕ್ತಿ | ಮಕ್ಕಳು ಹೇಳಿದ ಕಥೆ, ಕವಿತೆ, ನಾಟಕಗಳ ಬಗ್ಗೆ ಮೌಖಿಕ ಪ್ರಶ್ನೆಗಳನ್ನು ಶಿಕ್ಷಕರು ಕೇಳುವರು.<br><br>ಆಲಿಸಿದ ಕವಿತೆ, ಕಥೆಗಳಿಗೆ ಸಂಬಂಧಿಸಿ ಲಿಖಿತ/ಮೌಖಿಕ ಪ್ರಶ್ನೆಗಳು<br><br>ನಾಟಕ, ಪ್ರಹಸನಗಳಲ್ಲಿ ಬರುವ ಪಾತ್ರಗಳ ಹೆಸರುಗಳನ್ನು ತಿಳಿಸು.<br><br>ಓದಿದ ಪ್ರಬಂಧದ ಕುರಿತು ಆಲಿಸಿದ ಮಕ್ಕಳಿಗೆ ಮೌಖಿಕ ಪ್ರಶ್ನೆಗಳು. |

| ಕ್ರ ಸಂ | ತಿಂಗಳು / ವಾರ | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | | ಚಟುವಟಿಕೆ–5<br>ಗಿಡ–ಮರ ಪದ್ಯದ ವಾಚನ, ಕೃತಿಕಾರರ ಪರಿಚಯ, ಪದಗಳ ಅರ್ಥ, ಬೊಡ್ಡೆ, ಅನುದಿನ, ಕರಿದು<br>ಮಕ್ಕಳಿಂದ ಪದ್ಯದ ವಾಚನ<br><br>ಪಠ್ಯಪುಸ್ತಕದ ಪುಟ ಸಂಖ್ಯೆ 91,92 ಹಾಗೂ ಭಾಷಾಭ್ಯಾಸದ ಚಟುವಟಿಕೆಗಳು – ಇವುಗಳನ್ನು ಮಕ್ಕಳಿಂದ ಮಾಡಿಸುವುದು.<br><br>ಸುಮೇರು ಪುಟ ಸಂಖ್ಯೆ 49 ರ ಅಭ್ಯಾಸ ಚಟುವಟಿಕೆಗಳನ್ನು ಮಾಡಿಸುವುದು.<br><br>ದೀಕ್ಷಾ ಆಪ್ ಚಟುವಟಿಕೆ :<br>ದೀಕ್ಷಾ ಆಪ್ನಲ್ಲಿ ಗಿಡ–ಮರ ಪದ್ಯದ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಮೌಲ್ಯಮಾಪನ ಚಟುವಟಿಕೆಗಳು. | ಗಿಡ–ಮರ ಪದ್ಯದ ಸಾರಾಂಶಕ್ಕೆ ಪ್ರತಿಯೊಂದು ಮಗುವಿನಿಂದಲೂ ಒಂದೊಂದು ವಾಕ್ಯ ಪಡೆಯುವುದು.<br><br>ಅಭ್ಯಾಸ ಹಾಳೆ ಬಳಸಿ ಪದ್ಯಕ್ಕೆ ಸಂಬಂಧಿಸಿದ ಪ್ರಶ್ನೆಗಳು<br>ಉದಾ: ಗಿಡಮರಗಳು ಯಾವುದನ್ನು ಮೀರಿ ಬೆಳೆದಿವೆ?<br><br>ದೀಕ್ಷಾ ಆಪ್ನ ಮೌಲ್ಯಮಾಪನ ಚಟುವಟಿಕೆಗಳು |

**ಸೂಚನೆ :**

**ಈ ಸಾಮರ್ಥ್ಯಕ್ಕೆ ಶಿಕ್ಷಕರು ಸ್ವತಃ ಚಟುವಟಿಕೆಗಳನ್ನು ಸ್ಥಳೀಯ ಲಭ್ಯ ಸಂಪನ್ಮೂಲಗಳನ್ನು ಬಳಸಿಕೊಂಡು ರೂಪಿಸಲು ಸ್ವತಂತ್ರರು**

# ಪದ್ಯಭಾಗ: ಗಿಡಮರ

**ಮೂರನೇ ವಾರ** **ಅಭ್ಯಾಸದ ಹಾಳೆ – 3**

| | |
|---|---|
| 1) | **ಈ ಪದಗಳಿಗೆ ಅರ್ಥ ಬರೆಯಿರಿ**<br>1. ಕಡಲು =<br>2. ಬೊಡ್ಡೆ =<br>3. ಹಾಳು ಕೊಂಪೆ = |
| 2) | **ಈ ಪದ್ಯದ ಸಾಲುಗಳನ್ನು ಪೂರ್ಣಗೊಳಿಸಿ**<br>ಜಾತಿ– ಗೀತಿ, ---------------<br>ಮೀರಿ ಬೆಳೆದ ----------------<br>ಅವನು ಇವಳು ---------------<br>ಎಣಿಸುತ್ತಿಲ್ಲ ------------------ |
| 3) | **ಸೂಕ್ತ ಪದವನ್ನು ಆರಿಸಿ ಭರ್ತಿ ಮಾಡಿರಿ**<br>1. ಹಸುವು ------- ಕೊಡುತ್ತದೆ [ ಹಾಲನ್ನು / ಆಲನ್ನು ]<br>2. ನನ್ನ ------- ಮೈಸೂರು [ ಉರು / ಊರು ]<br>3. ನನ್ನ ಗೆಳತಿಗೆ ಪೆಟ್ಟಾದಾಗ -------- [ ಆಳು / ಅಳು ]<br>4. ಸಮಯವನ್ನು -------- ಮಾಡಬಾರದು [ ಆಳು / ಹಾಳು ]<br>5. ಬಾಳೆಹಣ್ಣನ್ನು ಸಿಪ್ಪೆ ------- ತಿನ್ನುತ್ತೇವೆ [ ಸುಳಿದು / ಸುಲಿದು ] |
| 4) | **ಈ ಕವಿಯ ಸ್ಥಳ, ಕೃತಿ, ಪ್ರಶಸ್ತಿಯನ್ನು ಹೆಸರಿಸಿ**<br>ಕವಿ: ಡಾ ಸತ್ಯಾನಂದ ಪಾತ್ರೋಟ<br>ಸ್ಥಳ: -------------<br>ಕೃತಿ: ------------<br>ಪ್ರಶಸ್ತಿ: ------------ |

| | |
|---|---|
| 5) | **ಕೆಳಗೆ ನೀಡಿರುವ ಪದಗಳನ್ನು 'ಅ' ಕಾರಾದಿಯಾಗಿ ಬರೆಯಿರಿ.**<br>ದಿನ, ಅದು, ಇದು, ಎಲೆ, ಹಸಿರು ಮಾತು, ಚೇತನ,<br>ಕಂಪು, ಬೆಳೆದು, ತರತರ<br><br>------------------------------------------------------------<br>------------------------------------------------------------<br>------------------------------------------------------------ |
| 6) | **ಕೆಳಗೆ ನೀಡುರುವ ವಾಕ್ಯಗಳನ್ನು ಆವರಣದಲ್ಲಿ ನೀಡಿರುವ ಅಕ್ಷರಗಳಲ್ಲಿ ಸೂಕ್ತವಾದುದನ್ನು ಆರಿಸಿ ವಾಕ್ಯ ಪೂರ್ಣಗೊಳಿಸಿ.**<br><br>1. ------ವೇರಿ --------ಡಗಿನ ಭಾಗಮಂಡಲದ ಬೆಟ್ಟದ ಬಳಿ ------ರಿದಾಗಿ ಹುಟ್ಟಿ ------ಳಗೆ ಹರಿಯುತ್ತದೆ.<br>[ ಕ / ಕಾ / ಕಿ / ಕೀ / ಕೆ / ಕೊ ]<br><br>2. ಕಾವೇರಿ -------ಏನಂತೆ -----ರಳಿ ------ರಿಯುವ ನದಿ.<br>[ ಹ / ಹಾ / ಹಿ / ಹೊ ] |

# ಪದ್ಯಭಾಗ : ಗಿಡಮರ

**ನಾಲ್ಕನೇ ವಾರ** **ಅಭ್ಯಾಸದ ಹಾಳೆ – 4**

1) ಗಿಡಮರ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

## ಗದ್ಯ: ಸೀನಶೆಟ್ಟರು ನಮ್ಮ ಟೀಚರು

| ಕ್ರ ಸಂ | ತಿಂಗಳು / ವಾರ | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 4 | ಆಗಸ್ಟ್ 3 ನೇ ವಾರ ಹಾಗೂ 4 ನೇ ವಾರ | ವಿವಿಧ ಪದಗಳ ಉಚ್ಚಾರಣೆಯಲ್ಲಿರುವ ಧ್ವನಿ ಸಾಮ್ಯತೆ, ಧ್ವನಿ ವ್ಯತ್ಯಾಸಗಳನ್ನು ಅರ್ಥ ಮಾಡಿಕೊಂಡು ಓದುವುದು. | **ಚಟುವಟಿಕೆ–1**<br>ಶಿಕ್ಷಕರು ಮಕ್ಕಳಿಗೆ ಮಿಂಚುಪಟ್ಟಿಗಳನ್ನು ನೀಡಿ ಕೆಳಗಿನ ಪದಗಳನ್ನು ಓದಲು ತಿಳಿಸುವರು<br>ಅಕ್ಕಿ–ಹಕ್ಕಿ ಫಲ–ಪಲ<br>ಶಂಕರ–ಸಂಕರ ಗೊಬ್ಬರ–ಗೊಬ್ರ<br>ಸೌಮ್ಯ–ಸೋಮ್ಯ ಶೀನ–ಸೀನ<br>ಶೆಟ್ಟಿ–ಸೆಟ್ಟಿ ಹೊಂದಿಸು–ವಂದಿಸು<br>ಧ್ವನಿ–ದನಿ<br><br>**ಚಟುವಟಿಕೆ–2**<br>ಸೀನಶೆಟ್ಟರು ನಮ್ಮ ಟೀಚರು ಗದ್ಯಭಾಗದ ಮಾದರಿ ಓದು, ಗಟ್ಟಿ ಓದು ಮತ್ತು ಮೌನ ಓದು.<br>ಕೃತಿಕಾರರ ಪರಿಚಯ<br>ಹೊಸ ಪದಗಳ ಅರ್ಥಗಳನ್ನು ತಿಳಿಯುವುದು<br>ಶಿಶು ಪ್ರಾಸಗಳು<br>ವ್ಯಾಕರಣಾಂಶಗಳು: ಸರ್ವನಾಮಗಳು<br>1. ಪುರುಷಾರ್ಥಕ ಸರ್ವನಾಮ<br>2. ಆತ್ಮಾರ್ಥಕ ಸರ್ವನಾಮ<br>3. ಪ್ರಶ್ನಾರ್ಥಕ ಸರ್ವನಾಮ<br>(ಪಠ್ಯಪುಸ್ತಕದ ಪುಟ ಸಂಖ್ಯೆ 21, 22, 23 ರ ಚಟುವಟಿಕೆಗಳನ್ನು ಮಾಡುವುದು)<br><br>**ಚಟುವಟಿಕೆ–3**<br>ನಿಮಗೆ ತಿಳಿದಿರುವ ಶಿಶುಪ್ರಾಸಗಳನ್ನು ಸಂಗ್ರಹಿಸಿ. | ಕೃತಿ ಸಂಪುಟ<br><br>ಕೃತಿ ಸಂಪುಟ<br><br>ಕೃತಿ ಸಂಪುಟ |

| | | | | |
|---|---|---|---|---|
| | | | **ಚಟುವಟಿಕೆ–4**<br>ನಮ್ಮ ದೈನಂದಿನ ಜೀವನದಲ್ಲಿ ಬಳಸುವ ಧ್ವನಿ ಸಾಮ್ಯತೆ, ಧ್ವನಿ ವ್ಯತ್ಯಾಸದ ಪದಗಳನ್ನು ಸಂಗ್ರಹಿಸಿ, ಚಾರ್ಟ್ ಮಾಡಿಸುವುದು.<br><br>**ಚಟುವಟಿಕೆ–5**<br>ಧ್ವನಿ ವ್ಯತ್ಯಾಸ ಉಚ್ಛಾರಣೆಯನ್ನು ಪ್ರತೀ ಮಗುವಿನಿಂದ ಮಾಡಿಸಿ ಧ್ವನಿ ಮುದ್ರಿಸುವುದು (ಧ್ವನಿ ಮುದ್ರಕ) ನಂತರ ಅದನ್ನು ಮಗು ಆಲಿಸಿ ಅರ್ಥೈಸಿಕೊಳ್ಳಲು ತಿಳಿಸುವರು. | |

## ಸೀನಸೆಟ್ಟರು ನಮ್ಮ ಟೀಚರು

## ಅಭ್ಯಾಸದ ಹಾಳೆ – 5

☛ **ಸೂಚನೆಗಳನ್ನು ಓದಿ ಉತ್ತರಿಸಿ:**

**1. ಸೂಕ್ತ ಪದ ಆರಿಸಿ ಬಿಟ್ಟ ಸ್ಥಳ ತುಂಬಿರಿ:**

ಅ. ________________ ರೀತಿಯ ಹೂಗಳು ತೋಟದಲ್ಲಿವೆ (ಅಲವು, ಹಲವು)

ಆ. ಆಕಾಶದಲ್ಲಿ _______________ಯು ಹಾರುತಿದೆ (ಹಕ್ಕಿ, ಅಕ್ಕಿ)

ಇ. ರೈತನು __________ ವನ್ನು ಹಣ ಕೊಟ್ಟು ತಂದನು (ಧನ, ದನ)

**2. ಸರಿಯಾದ ಪದವನ್ನು ಆರಿಸಿ, ನಮ್ಮನ್ನು ಪೂರ್ಣಗೊಳಿಸಿ.**

| | | | | |
|---|---|---|---|---|
| ಹರಕೆ–ಅರಕೆ | ಆನಂದ–ಹಾನಂದ | ಸಂಕ–ಶಂಕ | ಆಲು–ಹಾಲು | ಮೀನು–ಮಿನು |
| ಅಣ್ಣು–ಹಣ್ಣು | ಹಸಿರು–ಅಸಿರು | ಒಂದು–ವಂದು | ಹಗಲು–ಅಗಲು | ಹಾರಾಡು–ಆರಾಡು |
| ಯರಡು–ಎರಡು | ಅಂಸ–ಹಂಸ | ಊವು–ಹೂವು | | |

____________ ದಿನ _______________ ಹೊತ್ತಿನಲ್ಲಿ ನನ್ನ ತಾಯಿ ತನ್ನ ______________ ಪೂರೈಸಲು _____ _____ ಹಾಗೂ ______ ಗಳನ್ನು ತೆಗೆದುಕೊಂಡು ದೇವಾಲಯಕ್ಕೆ ಹೋದಳು. ದೇವಾಲಯದಲ್ಲಿ __________ ಜಾಗಟೆಗಳ ನಿನಾದ ಮೊಳಗುತ್ತಿತ್ತು. ನನ್ನ ತಾಯಿ ದೇವರ ಎದುರು ಕುಳಿತುಕೊಂಡು ಭಕ್ತಿ ಭಾವದಿಂದ ದೇವರನ್ನು ಪ್ರಾರ್ಥಿಸಿದಳು. ನಂತರ ತೀರ್ಥಪ್ರಸಾದ ತೆಗೆದುಕೊಂಡು ಹೊರಗೆ ಬಂದಳು.

ದೇವಾಲಯದ ಎದುರಿರುವ ಕೆರೆಯ ಪಕ್ಕದ _______ ಹುಲ್ಲಿನ ಮೇಲೆ ಕುಳಿತಳು. ಕೆರೆಯಲ್ಲಿ _______ಗಳಿದ್ದವು. ಅವು ಪರಸ್ಪರ ಆಡುತ್ತಿದ್ದವು. ಹಾಗೆಯೇ ನೀರಿನಲ್ಲಿ ________ ಗಳು ಆಚೆಯಿಂದೀಚೆ ಈಜಾಡುತ್ತಿದ್ದವು. ಮೇಲೆ ಪಕ್ಷಿಗಳು ಒಂದೆಡೆಯಿಂದ ಮತ್ತೊಂದೆಡೆಗೆ ______ ತ್ತಿದ್ದವು, ಇವನ್ನೆಲ್ಲಾ ನೋಡುತ್ತಾ ಪುಳಕಿತಳಾಗಿ ಮನೆಯ ಕಡೆಗೆ ಹೊರಟಳು.

3. **ಸರ್ವನಾಮಗಳಲ್ಲಿ ಎಷ್ಟು ವಿಧ? ಅವು ಯಾವುವು?**

______________________________________________________________________

________________

**4. ಆತ್ಮಾರ್ಥಕ ಸರ್ವನಾಮಗಳಿಗೆ ಎರಡು ಉದಾಹರಣೆ ಕೊಡಿ.**

________________________________________

________________

**5. ಪ್ರಶ್ನಾರ್ಥಕ ಸರ್ವನಾಮಗಳಿಗೆ ಉದಾಹರಣೆ ಕೊಡಿ.**

________________________________________

________________

**6. ಪುರುಷಾರ್ಥಕ ಸರ್ವನಾಮಗಳಿಗೆ ಉದಾಹರಣೆ ಕೊಡಿ.**

________________________________________

________________

**7. ಕೆಳಗಿನ ಶಿಶುಪ್ರಾಸ ಓದಿ**

ಗಣೇಶ ಬಂದ
ಕಾಯಿ ಕಡುಬು ತಿಂದ
ದೊಡ್ಕೆರೇಲಿ ಬಿದ್ದ
ಚಿಕ್ಕೆರೇಲಿ ಎದ್ದ

**8. ಈ ಪ್ರಶ್ನೆಗಳಿಗೆ ಉತ್ತರಿಸಿ:**

ಅ. ಮಾಂಡವಿ ಟೀಚರ್ ಯಾರನ್ನು ಪರಿಚಯಿಸಿದರು?

________________________________________

________________________________________

ಆ. ಮಕ್ಕಳು ಏನು ಹಾಕಿಕೊಂಡು ಗದ್ದೆಗೆ ಇಳಿದರು?

________________________________________

________________________________________

9.ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯದಲ್ಲಿ ಉತ್ತರಿಸಿ:

ಅ. ಸೀನಸೆಟ್ಟರ ವೇಷ ಹೇಗಿತ್ತು?

________________________________________

________________________________________

ಆ. ಹಾಲಪ್ಪನಿಗೆ ಹಾವು ಕಚ್ಚಿದಾಗ ಸೀನಸೆಟ್ಟರು ಏನು ಹೇಳಿದರು?

________________________________________

________________________________________

10. ಕೆಳಗಿನ ಮಾತನ್ನು ಯಾರು ಯಾರಿಗೆ ಹೇಳಿದರು?

ಅ. ಮುಂಚೆ ಸಸಿಗಳನ್ನು ಕೀಳಾಣ

________________________________________

________________________________________

ಆ. ಕೈ ಎಲ್ಲಿಗ್ ಹೋತು

| **ಮೊದಲನೇ ರೂಪಣಾತ್ಮಕ ಮೌಲ್ಯಮಾಪನ** | **ಸಿ.ಸಿ.ಇ ಅಡಿಯಲ್ಲಿ ನೀಡಬಹುದಾದ ಚಟುವಟಿಕೆಗಳು** |
|---|---|
| • ಅಭ್ಯಾಸ ಹಾಳೆಗಳು<br>• ಮೌಖಿಕ ಪ್ರಶ್ನೋತ್ತರ<br>• ಯೋಜನೆ<br>• ನಿಯೋಜಿತ ಕಾರ್ಯ | • ನಿನಗೆ ಇಷ್ಟವಾದ ಒಂದು ಕಥೆಯನ್ನು ಬರೆಯಿರಿ<br>• ರೂಢನಾಮ ಹಾಗೂ ಅಂಕಿತನಾಮಗಳಿಗೆ ತಲಾ 10 ಉದಾಹರಣೆಗಳನ್ನು ಬರೆಯಿರಿ (ನಿಯೋಜಿತ ಕಾರ್ಯ)<br>• ನಿನಗೆ ಗೊತ್ತಿರುವ ಮರಗಳ ಚಿತ್ರಗಳನ್ನು ಸಂಗ್ರಹಿಸಿ, ಹೆಸರುಗಳನ್ನು ಬರೆದು ಒಂದು (ಯೋಜನೆ) ಆಲ್ಬಂ ತಯಾರಿಸಿ.<br>• ದಿನಪತ್ರಿಕೆಗಳಲ್ಲಿ ಬರುವ ಶಿಶುಪ್ರಾಸಗಳನ್ನು ಸಂಗ್ರಹಿಸಿ. |